3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.270/2019**

ಪ್ರಾಸಾ 2

ಚಾಸಾ 2

| | |
|---|---|
| ಹೆಸರು | ಅರುಣ್ ಕುಮಾರ್ @ ಅರುಣ್ ಕುಮಾರ್ ನಾಯಕ್ |
| ತಂದೆಯ ಹೆಸರು | ನಾಗರಾಜಯ್ಯ |
| ವಯಸ್ಸು | 31 ವರ್ಷ |
| ಉದ್ಯೋಗ | ಗಾರ್ಮೆಂಟ್ಸ್ ನಲ್ಲಿ ಕೆಲಸ |
| ವಾಸಸ್ಥಳ | ಬೆಂಗಳೂರು |

ಸಾಕ್ಷಿಯನ್ನು ದಿನಾಂಕ 10.06.2025 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ಚಾಸಾ.1 ರವರು ನನ್ನ ದೊಡ್ಡಪ್ಪ. ತಾರೀಕಟ್ಟೆ ತಾಂಡ್ಯದಲ್ಲಿರುವ ನಮ್ಮ ಜಮೀನು ಇರುತ್ತದೆ. ಚಾಸಾ.1 ರವರು ಹೊಸದುರ್ಗದ ಹತ್ತಿರ ಕಡದಿನಕೆರೆಯಲ್ಲಿ ವಾಸ ಮಾಡುತ್ತಾರೆ. ನಮ್ಮ ಜಮೀನನ್ನು ಚಾಸಾ.1 ರವರು ಉಳುಮೆ ಮಾಡುತ್ತಿದ್ದರು. ಅವರಿಗೆ ಒಂದು ಟ್ರಾಕ್ಟರ್ ಇರುತ್ತದೆ.

2) ದಿನಾಂಕ 02.06.2019 ರಂದು ನನ್ನ ದೊಡ್ಡಪ್ಪ ಹೊಸದುರ್ಗದಿಂದ ಟ್ರಾಕ್ಟರ್ ನಲ್ಲಿ ರಾಗಿ , ಅಕ್ಕಿ , ಕುಂಟೆ ಹಾಕಿಕೊಂಡು ತಾರೀಕಟ್ಟೆ ಗೆ ಬಂದಿದ್ದರು. ಅವರು ಮನೆಗೆ ಬರುವುದಕ್ಕಿಂತ ಮುಂಚೆ ನಾನು ಮನೆಗೆ ಬಂದಿದ್ದೆ. ನಾನು ಹೊಟೇಲ್ ನಿಂದ ಊಟ ಮಾಡಿಕೊಂಡು ಊಟ ತಂದಿದ್ದೆ. ನಾನು ಊಟ ಮಾಡಿ ಮನೆಯಲ್ಲಿ ವಿಶ್ರಾಂತಿ ಪಡೆದುಕೊಳ್ಳುತ್ತಿದ್ದೆ. ಸ್ವಲ್ಪ ಹೊತ್ತಿಗೆ ಚಾಸಾ.1 ರವರು ಮನೆಗೆ ಬಂದಿದ್ದು ಆಗ ಸಮಯ ರಾತ್ರಿ 7.30 ರಿಂದ 8 ಗಂಟೆ ಆಗಿತ್ತು. ಚಾಸಾ.1 ರವರು ಮನೆಗೆ ಬಂದ ನಂತರ

ಆರೋಪಿ ಮತ್ತು ಇಬ್ಬರು ಕಾರಿನಲ್ಲಿ ಮತ್ತು ಇಬ್ಬರು ದ್ವಿಚಕ್ರ ವಾಹನದಲ್ಲಿ ಏಕಾಏಕಿ ನಮ್ಮ ಮನೆಗೆ ಬಂದು ಚಾಸಾ.1 ರವರನ್ನು ಹೊಡೆದಿರುತ್ತಾರೆ ಮತ್ತು ಚಾಸಾ.1 ರವರಿಗೆ ಬೋಳಿ ಮಗನೇ, ಲಂಬಾಣಿ ಸೂಳೇ ಮಗನೇ ಎಂದು ಬೈದಿರುತ್ತಾರೆ ಹಾಗೂ ಗಾಡಿಯನ್ನು ಟಚ್ ಮಾಡಿ ಬಂದಿದ್ದೀಯಾ ಎಂದು ಹೇಳುತ್ತಿದ್ದರು. ಆರೋಪಿಯು ದೊಣ್ಣೆಯಿಂದ , ಇನ್ನೊಬ್ಬರು ಅಡಿಕೆ ದಬ್ಬೆಯಿಂದ ಚಾಸಾ.1 ರವರಿಗೆ ಹೊಡೆದಿರುತ್ತಾರೆ. ಚಾಸಾ.1 ರವರನ್ನು ಮೇಲಕ್ಕೆ ಎತ್ತಿಕೊಂಡು ಹೂವಿನ ಗಿಡದ ಬೇಲಿಯ ಮೇಲೆ ಹಾಕಿರುತ್ತಾರೆ. ಗಲಾಟೆಯನ್ನು ನೋಡಿದ ನಂತರ ನಾನು ಜೊರಾಗಿ ಕಿರುಚಾಡಿರುತ್ತೇನೆ. ಆಗ ಚಾಸಾ.3 ವಮತ್ತು 4 ರವರು ನಮ್ಮ ಮನೆಯ ಹತ್ತಿರ ಓಡಿ ಬಂದಿರುತ್ತಾರೆ. ಅಷ್ಟರಲ್ಲಿ ಆರೋಪಿಯು ಚಾಸಾ.1 ರವರ ಜೇಬಿನಲ್ಲಿದ್ದ ಕೀ ನ್ನು ತೆಗೆದುಕೊಂಡು ಟ್ರಾಕ್ಟರ್ ನ್ನು ಚಾಲನೆ ಮಾಡಿಕೊಂಡು ಹೋಗಿರುತ್ತಾರೆ. ನಂತರ ಚಾಸಾ.1 ರವರನ್ನು ನಾನು ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತೇನೆ.

3) ಈ ಘಟನೆಯಾದ ಒಂದು ವಾರದ ನಂತರ ತಿಪಟೂರಿನ ಪೊಲೀಸರು ಘಟನಾ ಸ್ಥಳಕ್ಕೆ ಬಂದು ಸ್ಥಳ ಪರಿಶೀಲನೆ ಮಾಡಿ ಕೋಲು ಮತ್ತು ದೊಣ್ಣೆಯನ್ನು ವಶಕ್ಕೆ ತೆಗೆದುಕೊಂಡಿರುತ್ತಾರೆ. ಆಗ ಚಾಸಾ.1 ರವರು ಹಾಗೂ ಇತರರು ಇದ್ದರು.

4) ಈಗ ನನಗೆ ತೋರಿಸಿದ ದಾಖಲಾತಿಯಲ್ಲಿ ನನ್ನ ಸಹಿ ಇರುತ್ತದೆ. ಅದು ಪಂಚನಾಮೆ ಆಗಿದ್ದು ಅದನ್ನು ನಿಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ದೊಣ್ಣೆ ಮತ್ತು ಅಡಿಕೆ ದಬ್ಬೆಯನ್ನು ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು.ಮಾ.2 ಮತ್ತು 3 ಎಂದು ಗುರುತಿಸಲಾಗಿದೆ.

5) ಈಗ ನನಗೆ ತೋರಿಸಿದ ದಾಖಲಾತಿಯಲ್ಲಿ ನನ್ನ ಸಹಿ ಇರುತ್ತದೆ. ಅದು ಅಮಾನತ್ತು ಪಂಚನಾಮೆ ಆಗಿದ್ದು ಅದನ್ನು ನಿಪಿ.6 ಎಂದು, ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ತಾರೀಕಟ್ಟೆ ತಾಂಡ್ಯದಲ್ಲಿ

ಮಾಡಿರುತ್ತೇನೆ. ಪೊಲೀಸರು ನನ್ನನ್ನು ಹಂದನಕೆರೆ ಪೋ.ಠಾಣೆಯ ಹತ್ತಿರ ಕರೆಸಿದ್ದರು. ಪೋ.ಠಾಣಾ ಆವರಣದಲ್ಲಿದ್ದಂತಹ ಟ್ರಾಕ್ಟರ್ ಮತ್ತು ಟ್ರೈಲರ್ ನ್ನು ತೋರಿಸಿದ್ದು ಅದರಲ್ಲಿ cultivator, ಹಾರೆ , ಕುಂಟೆ ಇದ್ದವು. ನಂತರ ಪೊಲೀಸರು ಸ್ಥಳದಲ್ಲಿ ಬರೆದುಕೊಂಡಿರುತ್ತಾರೆ. ಆಗ ನಾನು, ಚಾಸಾ.1 , ತಾವರಾನಾಯ್ಕ, ನನ್ನ ಅಣ್ಣ ಭೀಮಾನಾಯ್ಕ ರವರು ಇದ್ದೆವು. ಸದರಿ ಮುದ್ದೆಮಾಲನ್ನು ನೋಡಿದರೆ ಗುರುತಿಸುತ್ತೇನೆ. ಟ್ರೈಲರ್ ನಲ್ಲಿದ್ದ ರಾಗಿ ಮತ್ತು ಅಕ್ಕಿಯನ್ನು ನನ್ನ ವಶಕ್ಕೆ ಕೊಟ್ಟಿರುತ್ತಾರೆ.

(ಮುಂದುವರಿದ ಮುಖ್ಯವಿಚಾರಣೆಗಾಗಿ ಮಾನ್ಯ ಅಭಿಯೋಜಕರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ

ಸಾಕ್ಷಿಯನ್ನು ದಿನಾಂಕ 18.03.2026 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಂದುವರಿದ ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

6) ಈಗ ನನಗೆ ತೋರಿಸಿದ ಭಾವಚಿತ್ರ (ನಿಪಿ.2 ಮತ್ತು 3) ಗಳಲ್ಲಿ ಕಾಣುವ ಟ್ರಾಕ್ಟರ್, ಕಲ್ಟಿವೇಟರ್ ಮತ್ತು ಕುಂಟೆಯನ್ನು ಗುರುತಿಸುತ್ತೇನೆ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ.ಎನ್.ಬಿ.ವಕೀಲರಿಂದಃ**

7) ನಾನು ತುಂಬಾ ವರ್ಷಗಳಿಂದ ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದೇನೆ ಎಂದರೆ ಸರಿ. ತಾರೀಕಟ್ಟೆತಾಂಡ್ಯದಲ್ಲಿ ನಮ್ಮ ಕುಟುಂಬದ ಸದಸ್ಯರೂ ಯಾರೂ ವಾಸ ಮಾಡುತ್ತಿಲ್ಲ ಎಂದರೆ ಸರಿ. ಪ್ರತಿ ವರ್ಷ ಚಾಸಾ.1 ರವರು ನಮ್ಮ ಊರಿಗೆ ಬಂದು ನಮ್ಮ ಜಮೀನನ್ನು ಉಳುಮೆ ಮಾಡಿ ಬಂದ ಫಸಲಿನಿಂದ ನಮಗೆ ಅರ್ಧ ಭಾಗ ಕೊಟ್ಟು, ಉಳಿದ ಅರ್ಧ ಭಾಗವನ್ನು ಅವರು ತೆಗೆದುಕೊಳ್ಳುತ್ತಾರೆ ಎಂದರೆ ಸರಿ. ದಿಃ02.06.2019 ರಂದು ಚಾಸಾ.1 ರವರು ಕರದೀಕೆರೆ ಗ್ರಾಮದಿಂದ ನಮ್ಮ ಊರಿಗೆ ಉಳುಮೆ ಮಾಡಲು ಬರುತ್ತಿದ್ದರು ಎಂದರೆ ಸರಿ. ಅಂದು ರಾತ್ರಿ ಸುಮಾರು 10.30 ರಿಂದ 11 ಗಂಟೆ ಸಮಯದಲ್ಲಿ ಚಾಸಾ.1 ರವರು ನನಗೆ ಕರೆ ಮಾಡಿರುತ್ತಾರೆ ಎಂದರೆ ಸರಿ. ಆಗ ಚಾಸಾ.1 ರವರು ಚಿಕ್ಕನಾಯಕನಹಳ್ಳಿ ಮಾರ್ಗವಾಗಿ ಭೈಲಪ್ಪನಮಠದಿಂದ ನಮ್ಮ ಊರಿಗೆ ಬರುತ್ತಿದ್ದಾಗ ಅಂಕನಬಾವಿ ಬಳಿ ಎದುರಿನಿಂದ ಬರುತ್ತಿದ್ದ ಕಾರಿಗೆ ಟ್ರಾಕ್ಟರ್ ಡಿಕ್ಕಿಯಾಗಿ ಕಾರಿನ ಮುಂಭಾಗ ಜಖಂಗೊಂಡಿರುತ್ತದೆ, ಅಪಘಾತವು ನನ್ನ ತಪ್ಪಿನಿಂದಲೇ ಆಗಿರುತ್ತದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಕಾರಿನ ಮಾಲೀಕರಿಗೆ ಕಾರನ್ನು ನಾನೇ ರಿಪೇರಿ ಮಾಡಿಸಿಕೊಡುತ್ತೇನೆ ಎಂದು ಹೇಳಿದ್ದು, ನೀನು ಕೂಡಲೇ ಬಾ ಎಂದು ಚಾಸಾ.1 ರವರು ನನ್ನನ್ನು ಕರೆದಿದ್ದರು ಎಂದರೆ ಸರಿ. ಕಾರಿನ ಮಾಲೀಕರು ಪೊಲೀಸರಿಗೆ ದೂರನ್ನು ಕೊಡುತ್ತೇನೆ ಎಂದು ಹೇಳುತ್ತಿದ್ದಾರೆ ಎಂದು ಚಾಸಾ.1 ರವರು ನನ್ನನ್ನು ಕರೆದಿರುತ್ತಾರೆ ಎಂದರೆ ಸರಿ.

8) ದಿಃ03.09.2019 ರಂದು ನಾನು ಊರಿಗೆ ಬಂದಾಗ ಚಾಸಾ.1 ರವರು ನನಗೆ ಫೋನ್ ನಲ್ಲಿ ಹೇಳಿದ ವಿಚಾರಗಳನ್ನು ಪುನಃ ನನಗೆ ಹೇಳಿರುತ್ತಾರೆ ಎಂದರೆ ಸರಿ. ಚಾಸಾ.1 ರವರು ಕಾರನ್ನು ರಿಪೇರಿ ಮಾಡಿಸಲು ನನ್ನ ಹತ್ತಿರ ಹಣ ಇರುವುದಿಲ್ಲ ಎಂದು ನನಗೆ ಹೇಳಿರುತ್ತಾರೆ ಎಂದರೆ ಸರಿ. ಆದ್ದರಿಂದ, ನಾನು ತಾವರೆನಾಯ್ಕರವರನ್ನು ಭೇಟಿಯಾಗಿ ಈ ವಿಚಾರವನ್ನು ತಿಳಿಸಿದಾಗ ಅವರು ನನ್ನನ್ನು ಮತ್ತು ಚಾಸಾ.1 ರವರನ್ನು ಚಿಕ್ಕನಾಯಕನಹಳ್ಳಿಗೆ ಕರೆದುಕೊಂಡು ಹೋಗಿ ದೂರನ್ನು ತಯಾರಿಸಿ ಅದನ್ನು ಹಂದನಕೆರೆ ಪೋಲೀಸ್ ಠಾಣೆಯಲ್ಲಿ ಕೊಡಿಸಿರುತ್ತಾರೆ ಎಂದರೆ ಸರಿ. ಆ ದೂರಿನಲ್ಲಿ ಏನು ಬರೆದಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

9) ಪೊಲೀಸರು ಘಟನೆಯ ಬಗ್ಗೆ ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ ಮತ್ತು ಮೊದಲನೇ ಬಾರಿ ನ್ಯಾಯಾಲಯದ ಮುಂದೆ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳನ್ನು ಹಿಂದೆ ಪೊಲೀಸರ ಮುಂದೆ ಹೇಳಿರುವುದಿಲ್ಲ ಎಂದರೆ ಸರಿ. ಚಾಸಾ.1 ರವರ ಮೇಲೆ ಆರೋಪಿ ನೀಡಿರುವ ದೂರಿನ ಆಧಾರದ ಮೇರೆಗೆ ಚಿಕ್ಕನಾಯಕನಹಳ್ಳಿ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿ. ನಿಪಿ.5 ಮತ್ತು 6 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಮು.ಮಾ.2 ಮತ್ತು 3 ನ್ನು ಇದೇ ಮೊದಲ ಬಾರಿ ನ್ಯಾಯಾಲಯದ ಮುಂದೆ ನೋಡಿರುತ್ತೇನೆ ಎಂದರೆ ಸರಿ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಗೆ ಮುಖ್ಯ ವಿಚಾರಣೆಯಲ್ಲಿರುವ ಅಂಶಗಳಿಗೆ ವಿರುದ್ದವಾಗಿ ಪಾಟೀಸವಾಲಿನಲ್ಲಿ ಪ್ರಶ್ನೆಗಳಿಗೆ ಉತ್ತರಿಸಿರುವುದರಿಂದ ಪಾಟೀಸವಾಲಿಗೆ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು)

**ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

10) ದಿಃ02.06.2019 ರಂದು ರಾತ್ರಿ 10.30 ಗಂಟೆಗೆ ಚಾಸಾ.1 ರವರು ನನಗೆ ಕರೆ ಮಾಡಿದ್ದರು, ಆದರೆ ಯಾವ ನಂಬರ್ ನಿಂದ ಎಂದು ನನಗೆ ಗೊತ್ತಿಲ್ಲ. ದಿಃ15.06.2019 ರಂದು ಮತ್ತು ದಿಃ14.07.2019 ರಂದು ನನ್ನನ್ನು ಡಿವೈಎಸ್‌ಪಿರವರ ಕಚೇರಿಗೆ ಕರೆಸಿ ನನ್ನ ಹೇಳಿಕೆಯನ್ನು ಆಡಿಯೋ ವೀಡಿಯೋ ಚಿತ್ರೀಕರಣ ಮಾಡಿಕೊಂಡಿರುತ್ತಾರೆ ಎಂದರೆ ನೆನಪಿಲ್ಲ. ಹಿಂದಿನ ಬಾರಿ ವಿಚಾರಣೆಗೆ ಬಂದಾಗ ಪ್ರಕರಣಕ್ಕೆ ಪೂರಕವಾಗಿ ಸಾಕ್ಷಿ ನುಡಿದಿದ್ದರೂ ಸಹ ಈ ದಿನ ಆರೋಪಿಗೆ ಸಹಾಯ ಮಾಡುವ ಉದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ